<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ**</u>

**<u>ನ್ಯಾಯಾಲಯ ಬೈಲಹೊಂಗಲ</u>**

**<u>ಸಿ.ಸಿ. ನಂ. 1871/2023</u>**

ಸಿ ಡ್ಯೂ **-1**

ಪಿಡ್ಯೂ **- 1**

**ಸಾಕ್ಷಿದಾರರ ಹೆಸರು** ಃ ಯಲ್ಲಪ್ಪ ಲಕ್ಷ್ಮಣ ಕುರುಬರ

**ಸಾಕ್ಷಿದಾರರ ವಯಸ್ಸು** ಃ **70** ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಶೇತ್ಕಿ

**ಸಾಕ್ಷಿದಾರರ ವಿಳಾಸ** ಃ ಸಂಪಗಾವ

---

**<u>ಪ್ರಮಾಣ ವಚನ ಮಾಡಿದ ದಿನಾಂಕ ಃ 26.03.2025.</u>**

**<u>ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ</u>**

ಮೃತ ತಿಪ್ಪವ್ವ ನನಗೆ ಪರಿಚಯ ಇರುತ್ತಾರೆ. ಮೂರು ವರ್ಷಗಳ ಹಿಂದೆ ಬೆಳಗಾವಿ ರಸ್ತೆಯಲ್ಲಿ ಅಪಘಾತವಾಗಿರುತ್ತದೆ. ನಾನು ಪ್ರಕಾಶ ಗೌಡರ ರವರ ಹೊಲದಲ್ಲಿ ಆಡು ಮೇಯಿಸುತ್ತಿದ್ದೇನು ನನ್ನೊಂದಿಗೆ ಮೃತ ತಿಪ್ಪವ್ವ, ರೊಟ್ಟಿಯಾರ ಹಾಗೂ ಅವರ ಅಣ್ಣತಮ್ಮ ಇದ್ದರು. ನಾವು ಆಡು ಮೇಯಿಸುತ್ತಿದ್ದಾಗ ಬೈಲಹೊಂಗಲದ ಕಡೆಯಿಂದ ಕಾರಗಾಡಿ ವೇಗವಾಗಿ ಬಂದು ಅಪಘಾತಪಡಿಸಿರುತ್ತಾನೆ. ನನಗೆ ಕಾಲಿಗೆ ಮೈಯಗೆ ಪೆಟ್ಟಾಗಿರುತ್ತದೆ. ತಿಪ್ಪವ್ವಳಿಗೆ ಕೈಗೆ ಕಾಲಿಗೆ ಪೆಟ್ಟಾಗಿರುತ್ತದೆ. ರೊಟ್ಟಿಯಾರ ಅವರಿಗೆ ಹಾಗೂ ಅವರ ಸಹೋದರನಿಗೆ ಮೈ ಕೈಗೆ ಪೆಟ್ಟಾಗಿರುತ್ತದೆ. ಕಾರಗಾಡಿ ಚಾಲಕನ ಹೆಸರು ಗೊತ್ತಿರುವುದಿಲ್ಲ. ಬೆಳಗಾವಿ ಸರ್ಕಾರಿ ಆಸ್ಪತ್ರೆಗೆ ನಾವು **4** ಜನ ಹೋದೆವು. ನಾನು ಹೆಚ್ಚಿನ ಚಿಕಿತ್ಸೆಗಾಗಿ ವಿಜಯ ಆಸ್ಪತ್ರೆ ಬೆಳಗಾವಿಗೆ ಹೋದೆನು. ತಿಪ್ಪವ್ವ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಗೆ ಹೋದಳು. ನಾನು ಬೆಳಗಾವಿಯ ಆಸ್ಪತ್ರೆಯಲ್ಲಿ ದೂರನ್ನು ನೀಡಿದೇನು. ಸಾಕ್ಷಿ ದೂರಿನಲ್ಲಿರುವ ತನ್ನ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ದೂರನ್ನು ನಿಶಾನೆ ಪಿ **1** ಎಂದು ಗುರುತಿಸಲಾಯಿತು. ತಿಪ್ಪವ್ವ ಅಪಘಾತವಾದ ನಂತರ ತೀರಿಕೊಂಡಿರುತ್ತಾರೆ. ಪೊಲೀಸರಿಗೆ ನಾನು ಮರುಹೇಳಿಕೆ ನೀಡಿರುತ್ತೇನೆ. ಅಪಘಾತ ಕಾರ ಗಾಡಿ ಚಾಲಕನ ತಪ್ಪಿ ನಿಂದ ಆಗಿರುತ್ತದೆ. ಆರೋಪಿಯನ್ನು ನೋಡಿ ಗುರುತಿಸುವರು.

**(ಈ ಹಂತದಲ್ಲಿ ಸಾಕ್ಷಿಯು ಅಬಿಯೋಜನೆಯ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಎಪಿಪಿರವರು ಕೇಳಿಕೊಂಡಿದ್ದು ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬಂದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀಸವಾಲು ಮಾಡಲು ಎಪಿಪಿ ರವರಿಗೆ ಅವಕಾಶ ನೀಡಲಾಯಿತು.)**

**<u>ವಾಟೀ ಸವಾಲುಃ ಎಪಿಪಿ ರವರಿಂದ</u>**

ಚಾಲಕ ತನ್ನ ಹೆಸರು ಬಸವರಾಜ ವಿರುಪಾಕ್ಷಪ್ಪ ಸಂಗೋಳ್ಳಿ ಎಂದು ಹೇಳಿದನು ಎಂದರೆ ಸರಿ. ಇನ್ನೊಬ್ಬ ಗಾಯಾಳುವಿನ ಹೆಸರು ಬಸವರಾಜ ರುದ್ರಪ್ಪ ರೋಟ್ಟಿ ಎಂದರೆ ಸರಿ. ಇನ್ನೋಬ್ಬ ಅಣ್ಣತಮ್ಮನ ಹೆಸರು ಸುಮಿತ ಬಾಳಪ್ಪ ತಿಳಗಂಜಿ ಎಂದರೆ ಸರಿ. ರೋಟ್ಟಿಯವರ ಮೋಟಾರ ಸೈಕಲಗೆ ಹಾಯಿಸಿ ಅಪಘಾತಪಡಿಸಿರುತ್ತಾರೆ ಎಂದರೆ ಸರಿ.

**ವಾಟೀ ಸವಾಲುಃ ಆರೋಪಿಪರ ವಕೀಲರು ಸಮಯ ಕೋರಿದ್ದು, ಸಕಾರಣ ಇಲ್ಲದ ಕಾರಣ ನಿರಾಕರಿಸಲಾಯಿತು.**

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ